

# ಆಟಿಕೆಗಳತ್ತ ಇರಲಿ ಚಿತ್ತ

**ಇಂದಿನ ಡಿಜಿಟಲ್ ಯುಗದಲ್ಲೂ ಆಟಿಕೆಗಳು ಅವಶ್ಯವೇ ಎಂಬ ಪ್ರಶ್ನೆ ಮೂಡುವುದು ಸಹಜ. ಡಿಜಿಟಲ್ ಆಟಿಕೆಗಳಿಗಿಂತ ನೈಜವಾಗಿ ಕೈಗಳಿಂದ ಸ್ಪರ್ಶಿಸಿ ಅದರ ಅನುಭವ ಪಡೆಯುವ ಆಟಿಕೆಗಳು ಮಕ್ಕಳ ಬೆಳವಣಿಗೆಗೆ ಹೆಚ್ಚು ಪರಿಣಾಮಕಾರಿ.**

■ **ಆರ್.ಬಿ. ಗುರುಬಸವರಾಜ**

ಮನುಷ್ಯನಿಗೆ ಬಾಲ್ಯದಿಂದ ನಿರ್ದಿಷ್ಟ ವಯಸ್ಸಿನವರೆಗೂ ಆಟಿಕೆಗಳು ಬೇರ್ಪಡಿಸಲಾಗದ ವಸ್ತುಗಳಾಗಿವೆ. ಆಟಿಕೆಗಳ ಮೂಲ ಉದ್ದೇಶ ಮನೋರಂಜನೆ ಅಷ್ಟೇ ಅಲ್ಲ. ಆಟದ ಮೂಲಕ ದೈಹಿಕ ಮತ್ತು ಜ್ಞಾನಾತ್ಮಕ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವುದೂ ಸಾಧ್ಯವಿದೆ.

ಪೂರ್ವ ಪ್ರಾಥಮಿಕ ಹಂತದ ಮಕ್ಕಳಲ್ಲಿ ಸಂಖ್ಯೆಗಳ ಎಣಿಕೆಗೆ, ಬಣ್ಣಗಳನ್ನು ಪತ್ತೆ ಹಚ್ಚಲು ಮತ್ತು ಭಾಷೆಗಳ ಮೂಲಭೂತ ಸಾಮರ್ಥ್ಯಗಳ ಬೆಳವಣಿಗೆಗೆ ಆಟಿಕೆಗಳು ಸಹಕಾರಿ ಎಂಬುದು ಶಿಕ್ಷಣ ತಜ್ಞರ ಅಭಿಮತ. ಮಕ್ಕಳ ಮನೋವಿಕಾಸವನ್ನು ಗಮನದಲ್ಲಿ ಇಟ್ಟುಕೊಂಡ ಆಟಿಕೆ ತಯಾರಕರು ಇತ್ತೀಚೆಗೆ ವೈವಿಧ್ಯಮಯ ಆಟಿಕೆಗಳನ್ನು ತಯಾರಿಸುತ್ತಿದ್ದಾರೆ.

ಡಿಜಿಟಲ್ ಯುಗದಲ್ಲೂ ಆಟಿಕೆಗಳು ಅವಶ್ಯವೇ ಎಂಬ ಪ್ರಶ್ನೆ ಮೂಡುವುದು ಸಹಜ. ಡಿಜಿಟಲ್ ಆಟಿಕೆಗಳಿಗಿಂತ ನೈಜವಾಗಿ ಕೈಗಳಿಂದ ಸ್ಪರ್ಶಿಸಿ ಅದರ ಅನುಭವ ಪಡೆಯುವ ಆಟಿಕೆಗಳು ಹೆಚ್ಚು ಪರಿಣಾಮಕಾರಿಯಾಗಿವೆ. ವಸ್ತುಗಳ ಗಾತ್ರ, ಆಕಾರ, ಬಣ್ಣ, ಬಳಕೆಯ ವಿಧಾನ ಇವುಗಳ ಕುರಿತ ಸ್ಪಷ್ಟ ಚಿತ್ರಣಕ್ಕಾಗಿ ಆಟಿಕೆಗಳು ಹೆಚ್ಚು ಸಹಾಯ ಮಾಡಬಲ್ಲವು. ಅದರಲ್ಲೂ ಮುಖ್ಯವಾಗಿ ಗಣಿತದ ಮೂಲ ಪ್ರಕ್ರಿಯೆಗಳ ಕಲಿಕೆಯಲ್ಲಿ ಆಟಿಕೆಗಳ ಪಾತ್ರ ತುಂಬಾ ಪರಿಣಾಮಕಾರಿ.

ಆಟಿಕೆಗಳು ಕಲಿಕೆಯಲ್ಲಿ ಆಸಕ್ತಿಯನ್ನು ಹುಟ್ಟಿಸಿ ಕೌಶಲ್ಯಾಭಿವೃದ್ಧಿ ಹೆಚ್ಚಿಸಿಕೊಳ್ಳಲು ತುಂಬಾ ಸಹಕಾರಿ. 1ರಿಂದ 3 ವರ್ಷದ ಮಕ್ಕಳು ಇತರರ ಜೊತೆ ಸಂಭಾಷಿಸಲು, ಸಂವಹನ ಮಾಡಲು ಆಟಿಕೆಗಳನ್ನು ಬಳಸುತ್ತಾರೆ. 3 ರಿಂದ 6 ವರ್ಷದ ಮಕ್ಕಳು ಆಟಿಕೆಗಳಿಂದ ಹೊಸ ಕಲಿಕೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಅಂದರೆ ಆಟಿಕೆಯನ್ನು ಬಿಚ್ಚುವುದು ಹಾಗೂ ಪುನರ್ ಜೋಡಿಸುವುದು, ಅಥವಾ ಮುರಿದು ಹಾಕಿ ಅದರಿಂದ ಹೊಸ ಆಟಿಕೆಯನ್ನು ತಯಾರಿಸುವುದು ಇತ್ಯಾದಿ ಹೊಸ ಚಟುವಟಿಕೆಗಳನ್ನು ಅನ್ವೇಷಿಸುತ್ತಾರೆ. 6ರಿಂದ 14 ವರ್ಷದ ಮಕ್ಕಳು ದೈಹಿಕ ಕಸರತ್ತಿಗೆ ಬೇಕಾದ ಆಟಿಕೆಗಳನ್ನು ಹೊಂದಿಸಿಕೊಳ್ಳುತ್ತಾರೆ. ಮುರಿದ ಮತ್ತು ಹಾಳಾದ ಆಟಿಕೆಗಳಿಂದ ಹೊಸ ವಸ್ತುಗಳನ್ನು ತಯಾರಿಸುವ ತವಕ ಈ ಹಂತದಲ್ಲಿ ಹೆಚ್ಚಾಗಿರುತ್ತದೆ.

ಮಕ್ಕಳಿಗೆ ಆಟಿಕೆಗಳನ್ನು ಬಳಸುವ ಬಗ್ಗೆ ಪಾಲಕರ ಮತ್ತು ಶಿಕ್ಷಕರ ಮಾರ್ಗದರ್ಶನ ಅತ್ಯಗತ್ಯ. ಮಕ್ಕಳ ಸೃಜನಶೀಲ ಮನಸ್ಸು ಅರಳುವಂತೆ ಹಾಗೂ ಹೊಸ ಆಲೋಚನೆಗಳತ್ತ ಹರಿಯುವಂತೆ ಸೂಕ್ತ ಮಾರ್ಗದರ್ಶನ ನೀಡಬೇಕು. ಗೊಂಬೆಗಳ ಮೂಲಕ ಮನುಷ್ಯರನ್ನು ಅರ್ಥ ಮಾಡಿಕೊಳ್ಳಲೂ ಮಕ್ಕಳು ಯತ್ನಿಸುವುದು ಕುತೂಹಲಕರ.

**ಆಟಿಕೆಗಳಿಂದ ಮಕ್ಕಳಿಗೆ ಹಲವಾರು ಪ್ರಯೋಜನಗಳಿವೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು**

★ **ಸಾಮಾಜಿಕ ಕೌಶಲ್ಯಗಳ ಅಭಿವೃದ್ಧಿ:** ಬಹುಶಃ ಮಗು ಮೊದಲು ಕಲಿಯಬೇಕಾದ ಕೌಶಲ್ಯವೆಂದರೆ ಸಾಮಾಜಿಕ ಕೌಶಲ್ಯ. ಅಂದರೆ ತನ್ನ ಪರಿಸರವನ್ನು ಅನ್ವೇಷಿಸುವ ಹಾಗೂ ತನ್ನ ಜೊತೆ ಇರುವವರ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಅದಕ್ಕೆ ಪೂರಕವಾಗಿ ಪ್ರತಿಕ್ರಿಯಿಸುವ ಕೌಶಲ್ಯಗಳನ್ನು ಕಲಿಯುವುದು ಅವಶ್ಯಕ. ಆಟಗಳಲ್ಲಿನ ತಿರುವುಗಳು ಭವಿಷ್ಯದಲ್ಲಿ ಎದುರಾಗುವ ಜೀವನದ ಸಮಸ್ಯೆಗಳನ್ನು ಎದುರಿಸುವ ಕೌಶಲ್ಯ ಬೆಳೆಸುತ್ತವೆ.

★ **ಜ್ಞಾನ ಗ್ರಹಣ ಕೌಶಲ್ಯಗಳ ಅಭಿವೃದ್ಧಿ:** ನೆನಪಿಟ್ಟುಕೊಳ್ಳುವಿಕೆ, ಸಮಸ್ಯಾ ಪರಿಹಾರ, ಬಣ್ಣಗಳ ಗುರುತಿಸುವಿಕೆ ಮುಂತಾದ ಜ್ಞಾನಗ್ರಹಣ ಕೌಶಲ್ಯಗಳನ್ನು ಆಟಿಕೆಗಳು ಬೆಳೆಸುತ್ತವೆ. ಮುಖ್ಯವಾಗಿ ವಸ್ತುಗಳ ಗಾತ್ರ, ಆಕಾರ, ಬಣ್ಣಗಳನ್ನು ಅನುಭವಿಸುತ್ತಾ ಮಕ್ಕಳು ಕಲಿಯುತ್ತಾರೆ. ಹಾಗಾಗಿ ಜ್ಞಾನಾತ್ಮಕ ಪ್ರಕ್ರಿಯೆ ಹೆಚ್ಚು ಹೆಚ್ಚು ಬೆಳೆಯುತ್ತದೆ.

★ **ಭಾಷಾ ಕೌಶಲ್ಯಗಳ ಅಭಿವೃದ್ಧಿ:** ಹೊರಾಂಗಣ ಆಟಗಳ ಮೂಲಕ ಗುಂಪಿನಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಭಾಷೆಯ ಬಳಕೆ ಅಗತ್ಯ. ವಿವಿಧ ಸನ್ನಿವೇಶಗಳಲ್ಲಿ ಭಾಷೆಯ ಬಳಕೆ ಹೇಗಿರಬೇಕೆಂಬುದನ್ನು ಆಟಿಕೆಗಳು ಕಲಿಸುತ್ತವೆ.

★ **ದೈಹಿಕ ಕೌಶಲ್ಯಗಳ ಅಭಿವೃದ್ಧಿ:** ತೆವಳುತ್ತಾ ಸಾಗುವ ಮಗು ನಿಧಾನವಾಗಿ ಅಂಬೆಗಾಲಿಡುತ್ತಾ, ನಡೆಯಲು ಕಲಿಯುತ್ತದೆ. ಈ ಹಂತದಲ್ಲಿ ಮಗು ಕೈಗೆ ದೊರೆಯುವ ಪ್ರತೀ ವಸ್ತುವನ್ನು ಆಟಿಕೆಯಾಗಿ ಬಳಸಿಕೊಳ್ಳುತ್ತದೆ. ಆ ವಸ್ತುಗಳನ್ನು ಕೈಯಿಂದ ಹಿಡಿದು ಆಟವಾಡಲು ದೈಹಿಕ ಕಸರತ್ತು ನಡೆಸುತ್ತದೆ. ವಸ್ತುಗಳನ್ನು ದೂರ ಎಸೆಯುವ, ಎತ್ತರದಲ್ಲಿನ ವಸ್ತುಗಳನ್ನು ಮುಟ್ಟಲು ಪ್ರಯತ್ನಿಸುವ, ದೂರದವರೆಗೆ ವಸ್ತುಗಳನ್ನು ತಳ್ಳುವ ವಿವಿಧ ದೈಹಿಕ ಚಟುವಟಿಕೆಗಳನ್ನು ಮಾಡುವ ಮೂಲಕ ಸ್ನಾಯುಗಳನ್ನು ಗಟ್ಟಿಗೊಳಿಸಿಕೊಳ್ಳುತ್ತದೆ.

★ **ತರ್ಕ ಮತ್ತು ಕಲ್ಪನೆಗಳ ಅಭಿವೃದ್ಧಿ :** ಆಟಿಕೆಗಳ ಮೂಲಕ ಮಗು ತರ್ಕಬದ್ಧ ನಿರ್ಣಯಗಳನ್ನು ಕೈಗೊಳ್ಳುತ್ತದೆ. ಅಲ್ಲದೇ ಕಾಲ್ಪನಿಕತೆ ಮೂಲಕ ಮುಂದಿನ ಆಟವನ್ನು ನಿರ್ಣಯಿಸುತ್ತದೆ. ಇದರಿಂದ ಮಗುವಿನಲ್ಲಿ ಕಲ್ಪನಾ ಸಾಮರ್ಥ್ಯ ವೃದ್ಧಿಸುತ್ತದೆ.

ಇಂದು ಮಕ್ಕಳಿಗೆ ಆಟಿಕೆಗಳನ್ನು ಕೊಳ್ಳುವುದು ಅಂತಸ್ತಿನ ಪ್ರತೀಕವಾಗಿದೆ. ಮಗುವಿಗೆ ಇಷ್ಟವಿರಲಿ ಇಲ್ಲದಿರಲಿ ದುಬಾರಿ ಬೆಲೆಯ ಆಟಿಕೆಗಳನ್ನು ಕೊಳ್ಳುವುದು ಪಾಲಕರ ಆದ್ಯತೆ. ಆದರೆ ಬೆಲೆಗೆ ಆದ್ಯತೆ ನೀಡುವ ಬದಲಾಗಿ ಮಗುವಿನ ಮಾನಸಿಕ ಹಾಗೂ ಬೌದ್ಧಿಕ ಸ್ಥಿತಿಗೆ ಪೂರಕವಾದ ಆಟಿಕೆಗಳ ಖರೀದಿಗೆ ಆದ್ಯತೆ ಅವಶ್ಯಕ.